


# ಪಾಸ್ಟರ್ ರಸೆಲ್

ಒಂದು ಸಂಕ್ಷಿಪ್ತ ಜೀವನ ಚರಿತ್ರೆ

ಪ್ರಕಟನೆ : ಏಪ್ರಿಲ್ 2019

ಪಿಡಿಎಫ್ ರೂಪದಲ್ಲಿ ಲಭ್ಯ : www.dawnbiblestudents.com

ಸಂಪರ್ಕ :

ಜೆ. ಜಯಪ್ರಸಾದ್
ಎಫ್–01, ದಿವ್ಯಪಂಚಮಿ –2,
4ನೇ ಮುಖ್ಯ ರಸ್ತೆ, ತಾಯಪ್ಪ ಗಾರ್ಡನ್,
ಬಿಳೇಕಹಳ್ಳಿ, ಬೆಂಗಳೂರು – 560076.

ಮೊಬೈಲ್: +91 – 95350 96517

ಸತ್ಯವೇದ ವಿದ್ಯಾರ್ಥಿಗಳ ಒಂದು ಪ್ರಕಟನೆ

# ದಿವಂಗತ ಪಾಸ್ಟರ್ ರಸೆಲ್

## ಅವರ ಉತ್ತರಾಧಿಕಾರಿಯಾದ ಜೆ. ಎಫ್. ರೂದರ್ ಫೋರ್ಡ್ ಅವರಿಂದ ಬರೆಯಲಾದ ರಸೆಲ್ಲರ ಒಂದು ಸಂಕ್ಷಿಪ್ತ ಜೀವನ ಚರಿತ್ರೆ

"ಪಾಸ್ಟರ್ ರಸೆಲ್" ಅವರ ಲೇಖನಗಳು ವೃತ್ತಪತ್ರಿಕೆಗಳಲ್ಲಿ ಪ್ರತಿ ವಾರವೂ ಅವರ ಕಾಲದಲ್ಲಿ ಜೀವಿಸುತ್ತಿದ್ದ ಇತರ ಯಾವ ಮನುಷ್ಯನ ಲೇಖನಗಳಿಗಿಂತಲೂ ಹೆಚ್ಚಾಗಿ ಪ್ರಸಾರವಾಗುತ್ತಿದ್ದು, ನಿಸ್ಸಂದೇಹವಾಗಿ, ಅದು ಉತ್ತರ ಅಮೇರಿಕ ದೇಶದಲ್ಲಿ ಅಂದು ಜೀವಿಸುತ್ತಿದ್ದ ಎಲ್ಲಾ ಬೋಧಕರು ಉಪದೇಶಿಗಳ ಲೇಖನಗಳಿಗಿಂತಲೂ ಒಟ್ಟಾರೆ ಅಧಿಕವಾದ ಪ್ರಸಾರಣೆಯಲ್ಲಿತ್ತು. ಆರ್ಥರ್ ಬ್ರಿಸ್ಬೆನ್, ನೋರ್ಮನ್ ಹಾಪ್ ಗುಡ್, ಜಾರ್ಜ್ ಹೋರೆಸ್ ಲೋರಿಮರ್, ಡಾ. ಫ್ರಾಂಕ್ ಕ್ರೇನ್, ಫ್ರೆಡ್ರಿಕ್ ಹಸ್ಕಿನ್ಸ್ ಇನ್ನು ಹತ್ತಾರು ಇತರೆ ಶ್ರೇಷ್ಠ ಸಂಪಾದಕರ ಹಾಗೂ ಲೇಖಕರ ಕೂಟದ ಒಟ್ಟಾರೆ ಲೇಖನಗಳಿಗಿಂತಲೂ ಮಿಗಿಲಾದ ಪ್ರಸರಣೆಯಲ್ಲಿತ್ತು. – *ದಿ ಕಾಂಟಿನೆಂಟ್*

ಪಾಸ್ಟರ್ ರಸ್ಸಲ್ಲರೆಂದು ಗ್ರಂಥಕರ್ತರಾಗಿ ಉಪನ್ಯಾಸಕರಾಗಿ ಹಾಗೂ ಸುವಾರ್ತಾ ಸೇವಕರಾಗಿ ಪ್ರಪಂಚದಾದ್ಯಂತ ಪರಿಚಿತರಾದ ಚಾರ್ಲ್ಸ್ ಟೇಸ್ ರಸ್ಸಲ್ಲರು ಜನಿಸಿದುದು ಪೆನ್ಸಿಲ್ವೇನಿಯದ ಪಿಟ್ಸಬರ್ಗ್ ಎಂಬಲ್ಲಿ, 1852ನೇ ಇಸವಿಯ ಫೆಬ್ರವರಿ ತಿಂಗಳಿನ 16ನೇ ತಾರೀಖಿನಂದು; ಮೃತರಾದುದು 1916ನೇ ಇಸವಿಯ ಅಕ್ಟೋಬರ್ ತಿಂಗಳಿನ 31ನೇ ತಾರೀಖಿನಂದು. ಇವರು ಜೋಸೇಫ್ ಎಲ್. ಹಾಗೂ ಎಲೀಸ ಬಿರ್ನಿ ರಸ್ಸಲ್ಲರ ಪುತ್ರರಾಗಿದ್ದರು. ಇವರ ತಂದೆತಾಯಿಗಳಿಬ್ಬರೂ ಸ್ಕಾಟ್ಲೆಂಡ್ ದೇಶದ ಐರಿಷ್ ಜನಾಂಗದ ಮೂಲದವರು. ಇವರು ಸಾರ್ವಜನಿಕ ಶಾಲೆಯಲ್ಲಿ ಹಾಗೂ ಇತರ ಖಾಸಗಿ ಶಿಕ್ಷಕರಿಂದ ವಿದ್ಯಾಭ್ಯಾಸ ಪಡೆದರು. ಇವರು 1879ನೇ ಇಸವಿಯಲ್ಲಿ ಮರಿಯ ಫ್ರಾನ್ಸಿಸ್ ಆಕ್ಲೆ ಎಂಬುವರೊಂದಿಗೆ ವಿವಾಹವಾದರು. ಮಕ್ಕಳನ್ನು ಪಡೆಯುವ ಭಾಗ್ಯ ಈ ದಂಪತಿಗಳಿಗೆ

ಇರಲಿಲ್ಲ. ಹದಿನೆಂಟು ವರುಷಗಳ ನಂತರದಲ್ಲಿ ತಮ್ಮ ನಿಯತಕಾಲಿಕ ಪತ್ರಿಕೆಯ ನಿರ್ವಹಣೆಯ ವಿಷಯವಾಗಿ ಒಂದು ಭಿನ್ನಾಭಿಪ್ರಾಯವು ಉಂಟಾಗಿ ಅವರ ವಿವಾಹ ಸಂಬಂಧವು ಬೇರ್ಪಡೆಯಾಗುವುದರಲ್ಲಿ ಕೊನೆಗೊಂಡಿತು. ಪಾಸ್ಟರ್ ರಸ಼ಲ್ಲರು ಪ್ರಕಟನೆಗೊಂಡ ಈ ಮುಂದಿನ ಪುಸ್ತಕಗಳ ಲೇಖಕರು.

ಆಬ್ಜೆಕ್ಟ್ ಆಂಡ್ ಮ್ಯಾನರ್ ಆಫ್ ಅವರ್ ಲಾರ್ಡ್ಸ್ ರಿಟರ್ನ್ (ನಮ್ಮ ಕರ್ತನ ಹಿಂದಿರುಗುವಿಕೆಯ ಉದ್ದೇಶ ಹಾಗೂ ರೀತಿ), ಫುಡ್ ಫಾರ್ ಥಿಂಕಿಂಗ್ ಕ್ರಿಶ್ಚಿಯನ್ (ಚಿಂತನಾಶೀಲ ಕ್ರೈಸ್ತರಿಗಿರುವ ಆತ್ಮೀಯ ಆಹಾರ), ಟ್ಯಾಬರ್ನಾಕಲ್ ಶ್ಯಾಡೋಸ್ (ದೇವದರ್ಶನ ಗುಡಾರದ ಛಾಯಾರೂಪಗಳು), ದಿ ಡಿವೈನ್ ಪ್ಲಾನ್ ಆಫ್ ದಿ ಏಜಸ್ (ದೇವರ ಯುಗಾಂತರಗಳ ಯೋಜನೆಗಳು), ದಿ ಟೈಮ್ ಈಸ್ ಅಟ್ ಹ್ಯಾಂಡ್ (ಕಾಲವು ಸಮೀಪವಾಯಿತು), ದೈ ಕಿಂಗ್ಡಮ್ ಕಮ್ (ನಿನ್ನ ರಾಜ್ಯವು ಬರಲಿ), ದಿ ಬ್ಯಾಟಲ್ ಆಫ್ ಆರ್ಮೆಗಿದ್ದೋನ್ (ಆರ್ಮೆಗಿದ್ದೋನ್ ಯುದ್ಧ), ದಿ ಅಟೋನ್ಮೆಂಟ್ ಬಿಟ್ವೀನ್ ಗಾಡ್ ಆಂಡ್ ಮ್ಯಾನ್ (ದೇವರ ಮತ್ತು ಮನುಷ್ಯರ ನಡುವಿನ ಸಂಧಾನ), ದಿ ನ್ಯೂ ಕ್ರಿಯೇಷನ್ (ಹೊಸ ಸೃಷ್ಟಿ) ವ್ಹಾಟ್ ಸೇ ದಿ ಸ್ಕ್ರಿಪ್ಚರ್ ಅಬೌಟ್ ದ ಹೆಲ್ (ನರಕದ ಬಗ್ಗೆ ದೇವರ ವಾಕ್ಯವು ಹೇಳುವುದು ಏನು?), ವ್ಹಾಟ್ ಸೇ ದಿ ಸ್ಕ್ರಿಪ್ಚರ್ ಅಬೌಟ್ ದಿ ಸ್ಪಿರಿಟಿಸಮ್ (ಆತ್ಮಕ್ಕೆ ಸಾವಿಲ್ಲವೆಂಬ ತತ್ವದ ಬಗ್ಗೆ ದೇವರ ವಾಕ್ಯವು ಹೆಳುವುದು ಏನು?), ಓಲ್ಡ್ ಥಿಯಾಲಜಿ ಟ್ರಾಕ್ಟ್ಸ್ (ಪುರಾತನ ದೈವಿಕ ಶಾಸ್ತ್ರದ ಕರಪತ್ರಗಳು), ದಿ ಫೋಟೋ ಡ್ರಾಮಾ ಆಫ್ ಕ್ರಿಯೇಷನ್ (ಸೃಷ್ಟಿಯ ವಿಷಯವಾದ ಛಾಯಾಚಿತ್ರ ರೂಪಕ), ಇತ್ಯಾದಿ, ಇತ್ಯಾದಿ.

ಕ್ರೈಸ್ತ ತಂದೆತಾಯಿಗಳ ಪ್ರಭಾವದಲ್ಲಿ ಬೆಳೆದ ರಸ಼ಲ್ಲರು ಕಿರಿಯ ವಯಸ್ಸಿನಲ್ಲೇ ದೈವಶಾಸ್ತ್ರದಲ್ಲಿ ಆಸಕ್ತರಾಗಿ ಕಾಂಗ್ರಿಗೇಶನ್ ಚರ್ಚ್ ಸೇರಿ ಸ್ಥಳೀಯ ಸುವಾರ್ತಾ ಕಾರ್ಯದಲ್ಲಿ ಸಕ್ರಿಯರಾದರು. "ಅಗ್ನಿನರಕ" ಎಂಬ ಹಳೆಯ ಶೈಲಿಯ ವಿಷಯವನ್ನು ನಂಬಿದವರಾದ ಅವರ ಉಪದೇಶಕರು ಅದನ್ನು ಅವರಿಗೆ ಭೋಧಿಸಿದ್ದರು. ಹದಿನೈದನೇ

ವರುಷದ ಹುಡುಗಾಟಿಕೆ ಆಸಕ್ತಿಹೊಂದಿದ್ದ ಅವರಿಗೆ-ದೇವರಲ್ಲಿ ಅಪನಂಬಿಗಸ್ತನಾದ ಒಬ್ಬ ಸ್ನೇಹಿತನನ್ನು ನಂಬಿಕೆಗೆ ಮತ್ತೆ ಕರೆತರುವ ಅವರ ಪ್ರಯತ್ನವು-ದೇವರಲ್ಲಿದ್ದ ಅವರ ವಿಶ್ವಾಸ ಕಳೆದು ಹೋಗುವಂತೆ ಮಾಡಿತು. ಹದಿನೇಳನೇ ವಯಸ್ಸಿನಲ್ಲಿ ಅವರು ದೇವರ ಅಸ್ತಿತ್ವವನ್ನು ಪ್ರಶ್ನಿಸುವವರಾದರು. ಇದು ಅವರ ಧರ್ಮೋಪದೇಶಕರು ಬೆಂಕಿ ಗಂಧಕಗಳ ಕೆರೆಯ ವಿಷಯವನ್ನು ಸಮರ್ಪಕವಾಗಿ ಪ್ರತಿಪಾದಿಸಲು ಅಸಮರ್ಥರಾದ ಕಾರಣದಿಂದ ಹೀಗಾಯಿತು. ಮಾನವರಲ್ಲಿ ಕೆಲವರು ಹೊರತಾಗಿ ಉಳಿದವರೆಲ್ಲರೂ ಅಗ್ನಿನರಕದಲ್ಲಿ ನಿತ್ಯಯಾತನೆ ಅನುಭವಿಸುವರೆಂಬ ವಿಷಯ ಅವರಿಗೆ ಬಹು ಹೇಯವಾಗಿತ್ತು. ಈ ಬಗ್ಗೆ ಅವರು--ನಿತ್ಯಯಾತನೆಗೆ ಗುರಿಮಾಡುವ ಪೂರ್ವೋದ್ದೇಶವುಳ್ಳ ದೇವರು ತನ್ನ ಶಕ್ತಿಸಾಮರ್ಥ್ಯಗಳಿಂದ ಮಾನವರನ್ನು ಸೃಷ್ಟಿಸುವಷ್ಟು ನ್ಯಾಯವಿವೇಕವುಳ್ಳವನಲ್ಲ, ಪ್ರೀತಿಯೂ ಉಳ್ಳವನಲ್ಲ. ಆತನ ಬುದ್ಧಿ ಮಟ್ಟವು ಮಾನವರಿಗಿಂತಲೂ ಕನಿಷ್ಠವಾದುದು--ಎಂದರು. ದೇವರ ಅಸ್ತಿತ್ವವನ್ನು ನಂಬುವವ ರಾಗಿದ್ದರೂ ದೇವರು ತನ್ನನ್ನು ಮನುಷ್ಯರಿಗೆ ಪ್ರಕಟಿಸಿಕೊಂಡಿರುವ ರೀತಿಯ ಬಗ್ಗೆ ಇರುವ ಸರ್ವೇಸಾಮಾನ್ಯ ವಾಗಿರುವ ಬೋಧನೆಯಲ್ಲಿ ಅವರಿಗೆ ನಂಬಿಕೆ ಇರಲಿಲ್ಲ.

ಮುಂದಿನ ಕೆಲವು ವರುಷಗಳಲ್ಲಿ ಬೆಳೆಯುವಾಗ ವಾಣಿಜ್ಯವಹಿವಾಟನ್ನು ನಿರ್ವಹಿಸುತ್ತಿದ್ದ ತಮ್ಮ ಜೀವಿತದಲ್ಲಿ ಅವರು ಬಹು ಸಮಯವನ್ನು ಬೌದ್ಧಧರ್ಮ, ಕನ್ಫೂಷಿಯಸ್ಸನ ಧರ್ಮ ಹಾಗೂ ಇತರ ಪ್ರಾಚೀನ ಧರ್ಮಗಳ ಬಗ್ಗೆ ವಿಚಾರಣೆ ಮಾಡುವುದರಲ್ಲಿ ಮುಡುಪಾಗಿಟ್ಟ ಪರಿಣಾಮವಾಗಿ ಇವೆಲ್ಲವುಗಳು ನಂಬಲು ಅನರ್ಹ-ವೆಂಬುದನ್ನು ಕಂಡುಕೊಂಡರು. "ನಿಜವಾದ ಸುವಾರ್ತೆ ಯಾವುದು?" ಎಂಬುದು ಅವರ ಸತ್ಯಾನ್ವೇಶಣೆಯ ಮನಸ್ಸಿಗೆ ಜೀವಂತ ಪ್ರಶ್ನೆಯಾಗಿ, ತಾವು ವ್ಯಾಪಾರ ವಹಿವಾಟಿನಲ್ಲಿ ಕೀರ್ತಿ ಸಂಪತ್ತನ್ನು ಗಳಿಸಿದ್ದರೂ, ಸತ್ಯವೇದವನ್ನು ಸಂಶೋಧಿಸಿ, ಮರಣಾನಂತರದ ನಿತ್ಯಯಾತನೆಯ ಶಿಕ್ಷೆಯ ಬಗ್ಗೆ ಅದು ಹೇಳುವುದು ಏನೆಂದು ಪರಿಶೋಧಿಸಲು ನಿರ್ಧರಿಸಿದರು. ಇದು ಅವರ ಒಂದು ಹೊಸ ಮಹತ್ವಾಕಾಂಕ್ಷೆಯ

# ಪಾಸ್ಟರ್ ರಸ಼ಲ್ಲರ ಬೋಧನೆಗಳು

ಸತ್ಯ ದೇವರನ್ನು ಸೇವಿಸಿ ಆರಾಧಿಸ ಬಯಸುವ ಸಹಜವಾದ ಭಯಭಕ್ತಿಯುಳ್ಳ ಶ್ರೀಯುತ ರಸ಼ಲ್ಲರ ಮನಸ್ಸು ಹೀಗೆ ವಾದಿಸಿತು-- "ಸತ್ಯವೇದದ ಆಧಾರ ಹೊಂದಿರುವುದಾಗಿ ಹೇಳಿಕೊಳ್ಳುವ ಕ್ರೈಸ್ತರ ವಿಶ್ವಾಶಸೂತ್ರಗಳು ಎಲ್ಲವೂ ಒಂದಕ್ಕೊಂದು ತದ್ವಿರುದ್ಧವಾದವುಗಳು. ಸತ್ಯವೇದವನ್ನು ಇದು ತಪ್ಪಾಗಿ ನಿರೂಪಿಸಿರಲು ಸಾಧ್ಯವೇ? ಅದು ನಿತ್ಯಯಾತನೆಯೆಂಬ ಭಯಾನಕವಾದ ವಿಷಯವನ್ನು ಬೋಧಿಸಿರ-ಲಾರದು." ಅನಂತರ ಅವರು ಮಾನವ ಕಲ್ಪಿತವಾದ ನಂಬಿಕೆಯ ಸೂತ್ರಗಳನ್ನು ಪರಾಮರ್ಶಿಸದೆ, ಸತ್ಯವೇದದ ಕಡೆಗೆ ಮನಸ್ಸು ಕೊಟ್ಟು ಅದರ ಬೋಧನೆಗಳಿಗೆ ಲಕ್ಷ್ಯಕೊಟ್ಟು ಅವುಗಳನ್ನು ಕ್ರಮಬದ್ಧವಾಗಿ ಪರಿಶೀಲಿಸಲು ನಿರ್ಧರಿಸಿದರು. ಪರಿಣಾಮವಾಗಿ ಸತ್ಯವೇದವು ದೇವರಿಂದ ಬಂದ ಮಾತುಗಳೆಂದು ಅವರಿಗೆ ದೃಢವಾಯಿತು. ಅವರು ಸತ್ಯವೇದ ಬೋಧನೆಗಳನ್ನು ಅಧ್ಯಯನ ಮಾಡುವುದರಲ್ಲಿಯೂ, ಧಾರ್ಮಿಕ ವಿಷಯವಾಗಿ ಪುಸ್ತಕಗಳನ್ನು ಮತ್ತು ಪತ್ರಿಕೆಗಳನ್ನು ಬರೆದು ಪ್ರಕಟಿಸುವುದರಲ್ಲಿಯೂ, ಕ್ರಿಸ್ತನ ರಾಜ್ಯದ ವಿಷಯವಾಗಿ ಉಪನ್ಯಾಸ ನೀಡಿ ಪ್ರಚಾರ ಮಾಡುವುದರಲ್ಲಿಯೂ ತಮ್ಮ ಉಳಿದ ಜೀವಿತವನ್ನು ಪೂರ್ಣವಾಗಿ ಮುಡುಪಾಗಿಟ್ಟರು. ಅಪೋಸ್ತಲನಾದ ಪೌಲನ ನಂತರದಲ್ಲಿ ಇವರು ಒಬ್ಬ ಶ್ರೇಷ್ಠ ಧರ್ಮಬೋಧಕರಾಗಿ ಜನರಲ್ಲಿ ಸತ್ಯವೇದದಲ್ಲಿನ ನಂಬಿಕೆಯನ್ನು ಸ್ಥಿರಪಡಿಸಲು ಈಚಿನ ಕಾಲದಲ್ಲಿನ ಇತರ ಎಲ್ಲಾ ಸೇವಕರಿಗಿಂತಲೂ ಹೆಚ್ಚಾಗಿ ದುಡಿದರು. ಸತ್ಯವನ್ನು ಹುಡುಕುವ ಎಲ್ಲಾ ಪ್ರೊಟೆಸ್ಟೆಂಟರು, ಕೆಥೋಲಿಕರು, ಯೆಹೂದ್ಯರು ಹಾಗು ಸ್ವತಂತ್ರ ವಿಚಾರವಾದಿಗಳೆಲ್ಲರನ್ನು ಸಾಧ್ಯವಾದಷ್ಟೂ ಸಂಪರ್ಕಿಸುವುದು ಅವರ ಗುರಿಯಾಗಿತ್ತು. ಅವರು ಕ್ರೈಸ್ತಪಂಗಡಗಳ ಎಲ್ಲಾ ವಿಧವಾದ ಕಟ್ಟುಪಾಡುಗಳಿಂದ ಸಂಪೂರ್ಣವಾಗಿ ಮುಕ್ತರನ್ನಾಗಿ ಮಾಡಿಕೊಂಡರು. ಅವರ ಕಾರ್ಯವು ಸಂಪೂರ್ಣವಾಗಿ ಸ್ವಾವಲಂಭಿತವಾಗಿತ್ತು.

ಪಾಸ್ಟರ್ ರಸ಼ಲ್ಲರು ಒಬ್ಬ ಹೊಸ ಧರ್ಮದ ಸಂಸ್ಥಾಪಕರಲ್ಲ; ಅಂಥವರೆಂದು ಅವರು ಹೇಳಿಕೊಂಡಿದ್ದೂ ಇಲ್ಲ. ಯೇಸು ಮತ್ತು

ಅಪೋಸ್ತಲರು ಬೋಧಿಸಿದ ಶ್ರೇಷ್ಠವಾದ ಸತ್ಯಾರ್ಥಗಳನ್ನು ಅವರು ಪಡಕೊಂಡು ಅವುಗಳ ಮೇಲೆ ಇಪ್ಪತ್ತನೇ ಶತಮಾನದ ಜ್ಞಾನಪ್ರಕಾಶವನ್ನು ತಿರುಗಿಸಿದರು. ದೇವರಿಂದ ತಮಗೆ ಅವುಗಳು ವಿಶೇಷವಾದ ರೀತಿಯಲ್ಲಿ ಪ್ರಕಟವಾಗಿದೆಯೆಂದು ಪ್ರತಿಪಾದಿಸದೆ ಪ್ರವಾದನಾ ವಾಕ್ಯಗಳ ಬೆಳಕಿನಲ್ಲಿ ಸತ್ಯವೇದವನ್ನು ಅರಿತುಕೊಳ್ಳಲು ಇದು ನಿಸ್ಸಂದೇಹವಾಗಿಯೂ ದೇವರು ನೇಮಿಸಿದ ಸೂಕ್ತ ಸಮಯವಾದುದರಿಂದ ದೇವರ ಮತ್ತು ಆತನ ಸೇವೆಗೆ ತಮ್ಮನ್ನು ಸಂಪೂರ್ಣವಾಗಿ ಪ್ರತಿಷ್ಠಿಸಿಕೊಂಡವರು ಇವುಗಳನ್ನು ಅರಿತುಕೊಳ್ಳಲು ಇದು ಸದವಕಾಶವಾಗಿರುವುದು ಎಂಬ ಅಂಶವನ್ನು ಎತ್ತಿಹಿಡಿದು ಸಾರಿದರು. ಅವರು ಪವಿತ್ರಾತ್ಮನಿಂದುಂಟಾಗುವ ಫಲಗಳನ್ನು ಮತ್ತು ವರಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲು ತಮ್ಮನ್ನು ಮೀಸಲಾಗಿಸಿಕೊಂಡ ಕಾರಣ ಕರ್ತನ ಈ ವಾಗ್ದಾನವು ಇವರಲ್ಲಿ ಹೀಗೆ ನೆರವೇರಿತು. – "ಇವುಗಳು ನಿಮ್ಮಲ್ಲಿದ್ದು ಹೆಚ್ಚುತ್ತಾ ಬಂದರೆ ಅವು ನಿಮ್ಮನ್ನು ಕ್ರಿಸ್ತನ ವಿಷಯವಾದ ಪರಿಜ್ಞಾನವನ್ನು ಹೊಂದುವುದರಲ್ಲಿ ಆಲಸ್ಯಗಾರರೂ ನಿಷ್ಫಲರೂ ಆಗದಂತೆ ಮಾಡುತ್ತವೆ."– 2 ಪೇತ್ರ 1:5–8

ಸತ್ಯವೇದದ ಅಧಿಕಾರಯುತವಾದ ವಾಕ್ಯಗಳನ್ನು ಉಲ್ಲೇಖಿಸಿ ತಮ್ಮ ಈ ಕೆಳಗೆ ಹೇಳಿರುವ ಬೋಧನೆಗಳನ್ನು ಸ್ಪಷ್ಟವಾದ ರೀತಿಯಲ್ಲಿ ಉಪದೇಶಿಸಿ ಅವುಗಳನ್ನು ಪ್ರತಿಪಾದಿಸಿದರು.

- ಮನುಷ್ಯನು ಒಬ್ಬ ಜೀವಿ (ಜೀವವುಳ್ಳ ಪ್ರಾಣಿ) ಹಾಗೂ ಮರ್ತ್ಯನು;
- ಆತನು ಅಮರತ್ವವುಳ್ಳ ಜೀವವನ್ನು ಪಡೆದಿಲ್ಲ;
- ಪಾಪದ ಸಂಬಳ ಮರಣ, ನಿತ್ಯಯಾತನೆ ಅಲ್ಲ;
- ಮರಣವು ಮನುಷ್ಯನು ದೇವರಾಜ್ಞೆ ಮೀರಿದುದರ ಫಲವಾಗಿ ಬಂದ ನ್ಯಾಯಸಮ್ಮತವಾದ ಶಿಕ್ಷೆ;
- ಬಿಡುಗಡೆ ಪಡೆಯದಿದ್ದಲ್ಲಿ, ಮರಣದ ಅರ್ಥವು ಮನುಷ್ಯನ ಅಳಿವು;

• ತನ್ನ ಮಹೋಪಕಾರ ಗುಣದ ದೆಸೆಯಿಂದ ದೇವರು (ಕ್ರಿಸ್ತನ ಜೀವವನ್ನು) ಒಂದು ವಿಶೇಷವಾದ ಈಡುಬಲಿಯನ್ನಾಗಿ ಏರ್ಪಡಿಸಿಕೊಡುವುದರ ಮೂಲಕ ಪಾಪಮರಣದ ದಾಸತ್ವದಿಂದ ಮನುಷ್ಯರಿಗೆ ಬಿಡುಗಡೆಯನ್ನು ದೊರಕಿಸಿಕೊಟ್ಟಿದ್ದಾನೆ.

• ದೇವರ ಪ್ರಿಯ ಕುಮಾರನಾದ ಯೇಸುವು ಶರೀರಧಾರಿಯಾಗಿ ಬಂದು ಪೂರ್ಣಮನುಷ್ಯನ ಸ್ಥಿತಿಗೆ ಬೆಳೆದು ಶರೀರ ಸಂಬಂಧದಲ್ಲಿ ಮರಣ ಹೊಂದಿ ಆತ್ಮ ಸಂಬಂಧವಾಗಿ ಎಬ್ಬಿಸಲ್ಪಟ್ಟು ದೈವೀಕ ಸ್ವಭಾವವನ್ನು ಹೊಂದಿರುವನು.

• ತನ್ನ ಮರಣ ಪುನರುತ್ಥಾನದ ಮೂಲಕವಾಗಿ ಕ್ರಿಸ್ತ ಯೇಸುವು ಈಡುಬೆಲೆಯನ್ನು ಗಳಿಸಿಕೊಂಡವನಾಗಿ ಮಾನವನನ್ನು ನಾಶನದಿಂದ ಬಿಡುಗಡೆ ಮಾಡಿ ಅವರನ್ನು ಪೂರ್ವಸ್ಥಿತಿಗೆ ತರಲು ಅದನ್ನು ಒದಗಿಸಿಕೊಟ್ಟಿದ್ದಾನೆ; ದೇವರ ಕೃಪೆಯಿಂದ ಯೇಸು ಕ್ರಿಸ್ತನು ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಿದನು.

• ಆದುದರಿಂದ ದೇವರ ನೇಮಿತಕಾಲದಲ್ಲಿ ಎಲ್ಲಾ ಮನುಷ್ಯರು ಜೀವಕ್ಕಾಗಿ ತೀರ್ಪು ಹೊಂದಲು ಒಂದು ಅವಕಾಶ ಪಡೆಯುವರು; ಈ ಕಾರಣಕ್ಕಾಗಿ ಸತ್ತವರೆಲ್ಲರಿಗೆ ಪುನರುತ್ಥಾನವಾಗುವದು.

• ಪರಲೋಕಕ್ಕೆ ಹಿಂದಿರುಗಿದ ಯೇಸು ಕ್ರಿಸ್ತನು ಎರಡನೆಯ ಸಾರಿ ಬರಬೇಕು;

• ಕರ್ತನ ಮೊದಲನೆಯ ಹಾಗೂ ಎರಡನೆಯ ಬರುವಿಕೆಯ ಮಧ್ಯದಲ್ಲಿನ ಸಮಯವನ್ನು ಮನುಷ್ಯರಿಂದ ಕ್ರಿಸ್ತನ ದೇಹದ ಅಂಗಗಳಾಗುವವರನ್ನು ಆದುಕೊಳ್ಳಲು ಮುಡುಪಾಗಿಟ್ಟಿರುವುದು.

• ಈ ಉನ್ನತ ಪದವಿಗೆ ಆಯ್ಕೆಯಾಗಲು ಅವಶ್ಯಕವಾದುದು – ಈಡು

ಬೆಲೆಯಾಗಿ ಸುರಿಸಲ್ಪಟ್ಟ ಯೇಸುವಿನ ರಕ್ತದಲ್ಲಿ ಸಂಪೂರ್ಣವಾದ ನಂಬಿಕೆ, ತಂದೆ ದೇವರ ಚಿತ್ತ ನೆರವೇರಿಸಲು ಪೂರ್ಣಪ್ರತಿಷ್ಠೆ, ತಂದೆ ದೇವರ ಚಿತ್ತ ನೆರವೇರಿಸುವಲ್ಲಿ ಮರಣದ ಪರ್ಯಂತರ ನಂಬಿಗಸ್ತರಾಗಿ ವಿಧೇಯತೆಯಿಂದ ಮುಂದುವರೆಯುವುದು.

• ಹೀಗೆ ಪ್ರತಿಷ್ಠಿತರಾಗಿ ಪವಿತ್ರಾತ್ಮನಿಂದ (ಅಂಕುರಿಸಲ್ಪಟ್ಟು) ಹುಟ್ಟಿದವರಾಗಿ ಪೂರ್ಣಜಯಶಾಲಿಗಳಾದವರು ಮೊದಲನೇ ಅಥವಾ ಶ್ರೇಷ್ಠ ಪುನರುತ್ಥಾನದಲ್ಲಿ ಪಾಲುಹೊಂದಿ ಪರಲೋಕರಾಜ್ಯದಲ್ಲಿ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ಕ್ರಿಸ್ತನೊಂದಿಗೆ ದಿವ್ಯಸ್ವಭಾವದಲ್ಲಿಯೂ ಮತ್ತು ಆತನ ಸಾವಿರ ವರುಷದ ಆಳ್ವಿಕೆಯಲ್ಲಿ ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸುವುದರಲ್ಲಿಯೂ ಪಾಲುಗಾರರಾಗುವರು;

• ಕ್ರಿಸ್ತನ ಸಾವಿರ ವರ್ಷದ ಆಳ್ವಿಕೆಯಲ್ಲಿ ಮರಣಹೊಂದಿದ ಎಲ್ಲರೂ ಎಬ್ಬಿಸಲ್ಪಟ್ಟು ಮನುಷ್ಯರಾಗಿ ಜೀವಹೊಂದಲು ಇಲ್ಲವೇ ಮರಣಕ್ಕಾಗಿ ನಿಷ್ಪಕ್ಷವಾದ ಒಂದು ಮುಕ್ತ ನ್ಯಾಯಪರೀಕ್ಷೆಯ ಅವಕಾಶವನ್ನು ಪಡೆಯುವರು.

• ಆ ಆಳ್ವಿಕೆಯಲ್ಲಿ ಹಾಗೂ ಅದರ ಅಂತ್ಯ ಭಾಗದಲ್ಲಿ ಮನಃಪೂರ್ವಕವಾಗಿ ವಿಧೇಯರಾಗದವರು ನಿತ್ಯವಾದ ನಾಶನಕ್ಕೆ ಹೋಗುವರು. ಹಾಗೆಯೇ ಕ್ರಿಸ್ತನ ನೀತಿಯ ಆಡಳಿತಕ್ಕೆ ಮನಃಪೂರ್ವಕವಾಗಿ ವಿಧೇಯರಾದವರು ಪರಿಪೂರ್ಣ ಮನುಷ್ಯನ (ದೇಹ ಮನಸ್ಸು ಸ್ವಭಾವ) ಸ್ಥಿತಿಗೆ ಮತ್ತೆ ಹಿಂದಿರುಗುವರು.

• ಈ ಸಾವಿರ ವರ್ಷದ ಆಳ್ವಿಕೆಯಲ್ಲಿ ಭೂಲೋಕವನ್ನು ಮತ್ತೆ ಏದೇನಿನ ಸ್ಥಿತಿಗೆ ತಂದು ಪರಿಪೂರ್ಣ ಮನುಷ್ಯರ ವಾಸಕ್ಕೆ ಪುನಃ ಯೋಗ್ಯವಾಗುವ ಹಾಗೆ ಮಾಡಲಾಗುವದು.

• ಪರಿಪೂರ್ಣ ಸ್ಥಿತಿಗೆ ಹಿಂದಿರುಗಿಸಲ್ಪಟ್ಟ ಮನುಷ್ಯರು ಸುಂದರವಾದ ಆ ಭೂಲೋಕದಲ್ಲಿ ಮುಂಬರುವ ಎಲ್ಲಾ ಯುಗಗಳಲ್ಲಿ ವಾಸಿಸುವರು.

# ಪಾಸ್ಟರ್ ರಸ್ಸೆಲ್ಲರ ಕಾರ್ಯಗಳು

ದೇವರು ಮಾನವರ ಉನ್ನತಿಗಾಗಿ ಮಾಡಿರುವ ಈ ಬಹು ಅದ್ಭುತವಾದ ಯೋಜನೆಯನ್ನು ಕಂಡ ಪಾಸ್ಟರ್ ರಸ್ಸೆಲ್ಲರು ಈ ಶ್ರೇಷ್ಠ ಸತ್ಯಾರ್ಥವನ್ನು ಪ್ರಪಂಚಕ್ಕೆಲ್ಲಾ ತಿಳಿಯಪಡಿಸಲು ತಮ್ಮ ಶಕ್ತಿಸಾಮರ್ಥ್ಯಗಳನ್ನೆಲ್ಲಾ ವಿನಿಯೋಗಿಸಿದರು. ಒಂದು ದಿನ ರಜೆಯನ್ನಾದರೂ ತೆಗೆದುಕೊಳ್ಳದೆ ಸತತವಾಗಿ ತಮ್ಮ ಮರಣದ ದಿನದವರೆಗೂ ಅವರು ದುಡಿದರು.

ಇತರ ಎಲ್ಲಾ ಕ್ರೈಸ್ತರಂತೆ ಕ್ರಿಸ್ತನ ಎರಡನೇ ಬರುವಿಕೆಯನ್ನು ಅವರು ಎದುರು ನೋಡುತ್ತಿದ್ದರು. 1872 ಹಾಗೂ 1876ನೇ ಇಸವಿಯ ಮಧ್ಯದಲ್ಲಿ ಸತ್ಯವೇದವು--ಕ್ರಿಸ್ತನು ಹಿಂದಿರುಗುವುದು ಮಾನವ ಶರೀರದಲ್ಲಿರದೆ ಆತ್ಮೀಕ ಶರೀರದಲ್ಲಿ ಮಾನವನ ಕಣ್ಣಿಗೆ ಅಗೋಚರವಾಗಿ ಅಲ್ಲದೆ ಆತನ ಎರಡನೆಯ ಪ್ರತ್ಯಕ್ಷತೆಯು 1874ನೇ ಇಸವಿಯ ಚಳಿಗಾಲದಲ್ಲಿ ಉಂಟಾಗಬೇಕಿರುವುದು--ಎಂಬುದನ್ನು ಸ್ಪಷ್ಟವಾಗಿ ಬೋಧಿಸುವುದೆಂದು ಕಂಡುಹಿಡಿದ ಅವರು "ಕ್ರಿಸ್ತನ ಹಿಂದಿರುಗುವಿಕೆಯ ಉದ್ದೇಶ ಹಾಗೂ ಅದರ ರೀತಿ" ಎಂಬ ಕಿರುಹೊತ್ತಿಗೆಯನ್ನು ಪ್ರಕಟಿಸಿದಾಗ ಅದು ಅಪೂರ್ವವಾಗಿ ಮಾರಾಟವಾಯಿತು.

ಅಮೇರಿಕಾ ಹಾಗೂ ಕೆನಡಾ ದೇಶದಲ್ಲಿನ ಸತ್ಯವೇದ ವಿದ್ಯಾರ್ಥಿಗಳಲ್ಲಿ ಅನೇಕರು ಈ ಕಿರುಹೊತ್ತಿಗೆಯಿಂದ ಪಡೆದುಕೊಂಡ ವಿಷಯಗಳಿಗೆ ಸ್ಪಂದಿಸಿದಾಗ ಪಾಸ್ಟರ್ ರಸಲ್ಲರ ಲೇಖನದ ವ್ಯವಹಾರ ವಹಿವಾಟು ಬೃಹದಾಕಾರವಾಯಿತು. ಸತ್ಯವನ್ನು ಅನ್ವೇಶಿಸುವುದಕ್ಕೆ ಪ್ರಾರಂಭಿಸಿದ ಮನಸ್ಸುಗಳ ಮುಂದೆ ಸತ್ಯವೇದದ ಸತ್ಯಾರ್ಥಗಳನ್ನು ಇಡಬೇಕೆಂಬುದನ್ನು ಮನಗಂಡು ಅವರು 1879 ರಲ್ಲಿ "ವಾಚ್ ಟವರ್ ಆಂಡ್ ಹೆರಾಲ್ಡ್ ಆಫ್ ಕ್ರೈಸ್ಟ್ ಪ್ರಸೆನ್ಸ್" ಎಂಬ ಪತ್ರಿಕೆಯ ಪ್ರಕಟನೆಯನ್ನು ಆರಂಭಿಸಿ ತಮ್ಮ ಮರಣದವರೆಗೂ ಅದರ ಏಕೈಕ ಸಂಪಾದಕರಾಗಿದ್ದರು.  ಈ ಪತ್ರಿಕೆಯು ತಿಂಗಳಿಗೆ ಎರಡು ಸಾರಿ

ಬಿಡುಗಡೆಯಾಗುತ್ತಿದ್ದು ಯಾವ ಜಾಹೀರಾತುಗಳಿಲ್ಲದೆ ಕೇವಲ ಧಾರ್ಮಿಕ ವಿಷಯಗಳಿಗೆ ಮಾತ್ರ ಮುಡುಪಾಗಿತ್ತು. ಅಮೇರಿಕಾ ಕೆನಡಾ ಇಂಗ್ಲೆಂಡ್ ದೇಶದಲ್ಲಿನ ಇಂಗ್ಲೀಷ್ ಮಾತನಾಡುವವರಲ್ಲಿ ತಿಂಗಳಿಗೆ ಎರಡು ಭಾರಿ 45,000 ಪ್ರತಿಗಳು ಪ್ರಸಾರವಾಗುತ್ತಿತ್ತು. ಇದು ಜರ್ಮನಿ, ಫ್ರೆಂಚ್, ಸ್ವೀಡಿಷ್, ಡ್ಯಾನಿಷ್, ನಾರ್ವೆ ಹಾಗೂ ಪೋಲಿಷ್ ಭಾಷೆಗಳಲ್ಲಿ ಅಮೇರಿಕಾ ಹಾಗು ಯೂರೋಪ್ ರಾಷ್ಟ್ರಗಳಲ್ಲಿ ಬಹು ದೊಡ್ಡ ಸಂಖ್ಯೆಯಲ್ಲಿ ಇದರ ಚಂದಾದಾರರಿಗೆ ತಲುಪುತ್ತಿತ್ತು.

## ಪಿಟ್ಸ್ ಬರ್ಗ್‌ನ ಮುಖ್ಯ ಕಾರ್ಯಾಲಯ ಕಿರಿದಾದುದು

1884ರಲ್ಲಿ ಪೆನ್ಸಿಲ್ವೇನಿಯ ರಾಜ್ಯದ, ಅಂದರೆ ಈಗ ಪಿಟ್ಸ್‌ಬರ್ಗ್ ಎಂಬ ಊರಿನ ಒಂದು ಭಾಗವಾಗಿರುವ, ಆಲೇಘನೀ ಎಂಬ ಸ್ಥಳದಲ್ಲಿ "ವಾಚ್ ಟವರ್ ಬೈಬಲ್ ಅಂಡ್ ಟ್ರ್ಯಾಕ್ಟ್ ಸೊಸೈಟಿ" ಎಂಬ ಸಂಸ್ಥೆಯನ್ನು ಸ್ಥಾಪಿಸಿ, ತಮ್ಮ ಮರಣದವರೆಗೂ ಅದರ ಅಧ್ಯಕ್ಷರಾಗಿ–ದ್ದರು. 1909ನೇ ಇಸವಿಯ ಪ್ರಾರಂಭದಲ್ಲಿ ಅಮೇರಿಕಾ ಹಾಗೂ ಹೊರ ದೇಶಗಳಲ್ಲಿ ಈ ಸಂಸ್ಥೆಯ ವಹಿವಾಟಿನ ಕಾರ್ಯದ ಪ್ರಮಾಣ ಎಷ್ಟು ವಿಸ್ತಾರವಾಗುತ್ತಾ ಬಂದಿತೆಂದರೆ ಆಗ ಯೂರೋಪ್ ರಾಷ್ಟ್ರಗಳ ಸಮೀಪಕ್ಕೆ ಮುಖ್ಯ ಕಾರ್ಯಾಲಯವನ್ನು ಸ್ಥಳಾಂತರಿಸುವುದು ಅಗತ್ಯವೆಂದು ಕಂಡುಬಂದು ಅದನ್ನು ನ್ಯೂಯಾರ್ಕ್ ರಾಜ್ಯದ ಬ್ರೂಕ್ಲಿನ್ ಪಟ್ಟಣಕ್ಕೆ ವರ್ಗಾಯಿಸಲಾಯಿತು.

## ಹೆನ್ರಿ ವಾರ್ಡ್ ಬೀಚರ್ಸ್ ಹೋಂ ಖರೀದಿ

ಬ್ರೂಕ್ಲಿನ್ ಪಟ್ಟಣದ ಕೊಲಂಬಿಯಾ ಹೈಟ್ಸ್ ಎಂಬ ಸ್ಥಳದಲ್ಲಿ 124ನೇ ಸಂಖ್ಯೆಯ ನಿವೇಶನದಲ್ಲಿ ಇರುವ ಹೆನ್ರಿ ವಾರ್ಡ್ ಬೀಚರ್ಸ್ ಭವನದ ಒಡೆತನ ಸಂಸ್ಥೆಗೆ ಬಂದದ್ದು ಒಂದು ಆಕಸ್ಮಿಕ. ಬ್ರೂಕ್ಲಿನ್ ಪಟ್ಟಣದ ಜಗತ್ಪ್ರಸಿದ್ಧ ವಾಗ್ಮಿಯಾಗಿದ್ದವರ ಈ ನಿವಾಸವನ್ನು ಪಾಸ್ಟರ್ ರಸ಼ಲ್ಲರು ತಮ್ಮ ಮರಣದವರೆಗೂ ತಮ್ಮ ಅಧ್ಯಯನಕ್ಕಾಗಿ ಹಾಗೂ ವಾಸಕ್ಕಾಗಿ ಬಳಸಿಕೊಂಡು ಬಂದಿದ್ದರು.

ಈ ಅಧ್ಯಯನದ ಸಮಯದಲ್ಲೇ ಅಮೇರಿಕಾ ದೇಶದ ಅಧ್ಯಕ್ಷರಾದ ಲಿಂಕನ್, ತಮ್ಮ ಸ್ಥಾನದ ವಿರುದ್ಧ ನಡೆದ ಪಿತೂರಿಯ ಕಾಲದಲ್ಲಿ, ಪ್ಲೈಮೋತ್ ಸಭೆಯ ಪಾಲಕರೊಂದಿಗೆ ಮಧ್ಯರಾತ್ರಿಯಲ್ಲಿ ಗುಪ್ತವಾಗಿ ಭೇಟಿಮಾಡಿ ಅವರು ಕೈಗೊಳ್ಳಲಿರುವ ತಮ್ಮ ಯೂರೋಪ್ ರಾಷ್ಟ್ರಗಳ ಉಪನ್ಯಾಸ ಪ್ರವಾಸದಲ್ಲಿ ಅಮೇರಿಕ ಒಕ್ಕೂಟದ ಬಗ್ಗೆ ಇರುವ ಬ್ರಿಟಿಷರ ಮನೋಭಾವವನ್ನು ಬದಲಿಸುವಂತೆ ಮಾಡಿ ಅವರನ್ನು (ಅಮೇರಿಕದ) ಸಂಘಟನೆಯ ಪರವಾಗಿ ಮನವೊಲಿಸುವಂತೆ ಇವರನ್ನು ಕೇಳಿಕೊಳ್ಳಲು ಸಾಧ್ಯವಾಯಿತು.

## ಪಾಸ್ಟರ್ ರಸಲ್ಲರ ವಿಸ್ತೃತಗೊಂಡ ಸುವಾರ್ತಾ ಪ್ರಚಾರ ಕಾರ್ಯ

ಪಾಸ್ಟರ್ ರಸಲ್ಲರು ಮಾತ್ರ ಸಂಸ್ಥೆಯಾದ "ವಾಚ್ ಟವರ್ ಬೈಬಲ್ ಅಂಡ್ ಟ್ರ್ಯಾಕ್ಟ್ ಸೊಸೈಟಿ" ಇದರ ಅಧ್ಯಕ್ಷರು ಮಾತ್ರವಲ್ಲದೆ 1909ರಲ್ಲಿ ನ್ಯೂಯಾರ್ಕ್ ರಾಜ್ಯ ಕಾರ್ಪೋರೇಶನ್ ವತಿಯಿಂದ ವ್ಯವಸ್ಥೆಗೊಂಡ "ಪೀಪಲ್ಸ್ ಪುಲ್ಪಿಟ್ ಅಸೋಸಿಯೇಶನ್" ಮತ್ತು 1913ರಲ್ಲಿ ಗ್ರೇಟ್ ಬ್ರಿಟನ್ ದೇಶದ ಲಂಡನ್ನಿನಲ್ಲಿ ಸಂಘಟಿಸಿದ "ಇಂಟರ್‌ನ್ಯಾಶನಲ್ ಬೈಬಲ್ ಸ್ಟೂಡೆಂಟ್ ಅಸೋಸಿಯೇಶನ್" ಎಂಬ ಸಂಸ್ಥೆಗಳಿಗೂ ಸಹ ಅಧ್ಯಕ್ಷರಾಗಿದ್ದರು. ನಂತರದಲ್ಲಿ ಆರಂಭಗೊಂಡ ಈ ಸಂಘಟನೆಗಳು ಮಾತ್ರ ಸಂಸ್ಥೆಯಾದ ವಾಚ್ ಟವರ್ ಸೊಸೈಟಿಯ ಶಾಖೆಗಳಾಗಿದ್ದು, ಇವುಗಳು ಬೇರೆ ಬೇರೆ ಸ್ಥಳಗಳಲ್ಲಿನ ಕಾನೂನು ಪಾಲನೆಯ ಉದ್ದೇಶಕ್ಕಾಗಿ ಸಂಘಟಿತವಾದವುಗಳು. ಆನಂತರದಲ್ಲಿ ಸ್ಥಾಪನೆಗೊಂಡ ಈ ಧಾರ್ಮಿಕ ಸಂಘಗಳ ಮೂಲಕ ಹಾಗೂ ವೇದಿಕೆಯ ಮತ್ತು ಪ್ರಸಂಗಪೀಠದ ಮೂಲಕವಾಗಿ ಹೊರಟುಬಂದ ಬಾಯೋಪದೇಶಗಳ ಸಹಿತವಾಗಿ ಕ್ರಿಸ್ತನ ರಾಜ್ಯದ ಸುವಾರ್ತೆಯನ್ನು ಸಾರಿದರು. 1881ನೇ ಇಸವಿಯಿಂದ 1914ನೇ ಇಸವಿಯವರೆಗೆ ಅವರಿಂದ ಬರೆಯಲ್ಪಟ್ಟ ಈ ಮುಂದಿನ ಪುಸ್ತಕ ಪ್ರಕಾಶನಗಳು ಅಪೂರ್ವವಾಗಿ ಪ್ರಸಾರಗೊಂಡಿದ್ದವು:

| | |
|---|---|
| ಫುಡ್ ಫಾರ್ ಥಿಂಕಿಂಗ್ ಕ್ರಿಶ್ಚಿಯನ್ಸ್ | : 14,50,000 |
| ಟಾಬರ್ನಾಕಲ್ ಷ್ಯಾಡೋಸ್ | : 10,00,000 |
| ಡಿವೈನ್ ಪ್ಲಾನ್ ಆಫ್ ದಿ ಏಜಸ್ | : 48,17,000 |
| ದಿ ಟೈಮ್ ಈಸ್ ಅಟ್ ಹ್ಯಾಂಡ್ | : 16,57,000 |
| ದೈ ಕಿಂಗ್ಡಮ್ ಕಮ್ | : 15,78,000 |
| ಬ್ಯಾಟಲ್ ಆಫ್ ಆರ್ಮೆಗೆದ್ದೋನ್ | : 4,72,000 |
| ದಿ ಅಟೋನ್ಮೆಂಟ್ ಬಿಟ್ವೀನ್ ಮ್ಯಾನ್ ಆ್ಯಂಡ್ ಗಾಡ್ | : 4,45,000 |
| ದಿ ನ್ಯೂ ಕ್ರಿಯೇಶನ್ | : 4,23,000 |
| ವ್ಹಾಟ್ ಸೇ ದಿ ಸ್ಕ್ರಿಪ್ಚರ್ ಅಬೌಟ್ ಹೆಲ್ | : 30,00,000 |

ಪಾಸ್ಟರ್ ರಸಲ್ಲರು "ಫೋಟೋ ಡ್ರಾಮಾ ಆಫ್ ಕ್ರಿಯೇಶನ್" ಎಂಬ ಚಿತ್ರಪ್ರದರ್ಶನದ ಗ್ರಂಥಕರ್ತರಾಗಿದ್ದರು. ಇದು ಅವರ ಮರಣದ ಮುನ್ನ 12 ದಶಲಕ್ಷ ಜನರಿಗೆ ಪ್ರದರ್ಶಿತವಾಗಿತ್ತು. ಅವರು ಬರೆದು ಪ್ರಕಟಿಸಿದ ಫೋಟೋ ಡ್ರಾಮಾ ದೃಶ್ಯಗಳು ಬಹು ವ್ಯಾಪಕವಾಗಿ ಪ್ರಸಾರಣೆಗೊಂಡಿತ್ತು. ಅವರ ಪುಸ್ತಕಪ್ರಕಾಶನಗಳು 35 ವಿವಿಧ ಬಾಷೆಗಳಿಗೆ ತರ್ಜುಮೆ ಮಾಡಲ್ಪಟ್ಟಿತ್ತು. ಅದೇ ಸಮಯದಲ್ಲಿ ಅವರು ಪ್ರಪಂಚದಾದ್ಯಂತ ಸುಮಾರು ಸಾವಿರದ ಇನ್ನೂರಕ್ಕೂ ಹೆಚ್ಚು ಸತ್ಯವೇದ ವಿದ್ಯಾರ್ಥಿ ಸಭೆಗಳಿಗೆ ಸಭಾಪಾಲಕರಾಗಿದ್ದರು. ಎಲ್ಲೆಲ್ಲಿ ಸಾಧ್ಯವೋ ಅಲ್ಲಿಯ ಸಭೆಗಳಿಗೆ ಬೇಟಿ ನೀಡುವುದರ ಮೂಲಕವಾಗಿಯೂ ಮತ್ತು ಇತರ ಸಭೆಗಳಿಗೆ ವಾಚ್ ಟವರ್ ಪತ್ರಿಕೆ ಹಾಗೂ ಪತ್ರವ್ಯವಹಾರಗಳ ಮೂಲಕವಾಗಿಯೂ ಸೇವೆ ಮಾಡುತ್ತಿದ್ದರು.

ಅವರು ಒಂದು ಉಪನ್ಯಾಸ ವೇದಿಕೆಯನ್ನು ಸಂಘಟಿಸಿ ಅದನ್ನು ನಿರ್ವಹಿಸುವವರಾಗಿ ಅದಕ್ಕೆ ಅನೇಕ ಉಪನ್ಯಾಸಕರನ್ನು ನೇಮಿಸಿ ಕೊಂಡು, ಅವರುಗಳು ಪ್ರವಾಸಗಳನ್ನು ಕೈಗೊಂಡು ಸತ್ಯವೇದದ ವಿಷಯವಾಗಿ ಉಪನ್ಯಾಸ ಮಾಡುವುದಲ್ಲದೆ ಅವರ ಮೂಲಕವಾಗಿ

ಸತ್ಯವೇದ ವಿಧ್ಯಾರ್ಥಿಗಳಿಗೆ ಮಾರ್ಗದರ್ಶನಗಳು ಸಹ ದೊರೆಯು-ವಂತೆ ಮಾಡಿದ್ದರು. ತಮ್ಮ ಬಿಡುವಿನ ಸಮಯದಲ್ಲಿ ಬಂದು ಸತ್ಯವೇದ ಬೋಧನೆಗಳ ವಿಷಯವಾಗಿ ಉಪನ್ಯಾಸಗಳನ್ನು ಮಾಡುವ ಸಹಾಯಕ ಉಪನ್ಯಾಸಕರಾಗಿ ಕೆಲಸ ವಾಡುವಂತೆ ನೂರಾರು ಜನರನ್ನು ಸಹ ಸಂಘಟನೆ ಮಾಡಿ, ಆ ಕೆಲಸದ ನಿರ್ವಹಣೆಯನ್ನೂ ಸಹ ತಾವು ಮಾಡುತ್ತಿದ್ದರು. ಬೈಬಲ್ ಸ್ಟೂಡೆಂಟ್ ಮಂಥ್ಲಿ ಎಂಬ ಮಾಸಿಕ ಪತ್ರಿಕೆಯ ಎಲ್ಲಾ ಅಂಕಣಗಳನ್ನು ಅವರೇ ಬರೆಯುತ್ತಿದ್ದು ಅದರ ವಾರ್ಷಿಕ ಪ್ರಸಾರಣೆಯು ಅನೇಕ ದಶಲಕ್ಷ ಪ್ರತಿಗಳು ಇರುತ್ತಿದ್ದವು.

ಅವರು ಮಾಡಿದ ಸಾಪ್ತಾಹಿಕ ಪ್ರಸಂಗಗಳ ಪ್ರಸಾರಣೆಯನ್ನು ವಾರ್ತಾಪತ್ರಿಕೆಯ ಒಂದು ಒಕ್ಕೂಟವು ನಿರ್ವಹಿಸುತ್ತಾ ತನಗೆ ಸೇರಿದ 2000 ವಾರ್ತಾಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದು, ಅದು ಒಂದು ಸಾರಿ ಅವರ ಉಪದೇಶಗಳನ್ನು ಒಟ್ಟಾರೆ 15 ದಶಲಕ್ಷ ಓದುಗರಿಗೆ ತಲುಪು-ವಂತೆ ಮಾಡುತ್ತಿತ್ತು. 4000ಕ್ಕೂ ಅಧಿಕವಾದ ವಾರ್ತಾಪತ್ರಿಕೆಗಳು ಈ ಧರ್ಮೋಪದೇಶಗಳನ್ನು ಪ್ರಕಾಶನ ಪಡಿಸುತ್ತಿದ್ದವೆಂದು ಹೇಳಲಾಗಿತ್ತು.

"ದಿ ಕಾಂಟಿನೆಂಟ್" ಎಂಬ ಪತ್ರಿಕೆಯ ಸಂಪಾದಕರು ಪಾಸ್ಟರ್ ರಸಲ್ಲರನ್ನು ಆಗಾಗ್ಗೆ ವಿರೋಧಿಸುವವರಾಗಿದ್ದು, ಒಂದು ಸಾರಿ ಅವರ ಬಗ್ಗೆ ಈ ಕೆಳಗೆ ಕಂಡ ಮಹತ್ವದ ಹೇಳಿಕೆಯನ್ನು ಪ್ರಕಟಿಸಿದ್ದರು.

"ಪ್ರತೀ ವಾರವೂ ವಾರ್ತಾಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಅವರ ಲೇಖನಗಳು ಅಂದು ಜೀವಿಸುತ್ತಿದ್ದ ಬೇರೆ ಯಾವ ಮನುಷ್ಯನಿಗಿಂತಲೂ ಅಧಿಕವಾಗಿತ್ತು. ನಿಸ್ಸಂಶಯವಾಗಿ ಅದು ಉತ್ತರ ಅಮೇರಿಕ ದೇಶದ ಎಲ್ಲಾ ಉಪದೇಶಿಗಳು ಹಾಗೂ ಸೌವಾರ್ತಿಕರುಗಳ ಒಟ್ಟಾರೆ ಪ್ರಕಟನೆಗಳಿಗಿಂತಲೂ ಅಧಿಕವಾಗಿರುತ್ತಿತ್ತು. ಆರ್ಥರ್ ಬ್ರಿಸ್ಬೇನ್, ನಾರ್ಮನ್ ಹಾಪ್ ಗುಡ್, ಜಾರ್ಜ್ ಹೋರೇಸ್ ಲೋರಿಮರ್, ಡಾಕ್ಟರ್ ಫ್ರಾಂಕ್ ಕ್ರೇನ್, ಫ್ರೇಡ್ರಿಕ್ ಹಸ್ಕಿನ್ ಮತ್ತು ಇತರ ಹತ್ತಾರು ಶ್ರೇಷ್ಠ ಸಂಪಾದಕರೆಂದು ಹೆಸರುಗೊಂಡವರ ಬರವಣಿಗೆಗಳಿಗಿಂತಲೂ ಹಾಗೂ ಲೇಖನಾ ಪ್ರಕಟನಾ ಮಂಡಲಿಗಳ ಒಟ್ಟಾರೆ ಪ್ರಸಾರಣೆಗಳಿಗೂ ಅದು ಮೀರಿರುತ್ತಿತ್ತು."

# ಸುವಾರ್ತಾ ಸುಗ್ಗಿಕಾರ್ಯ

ಪಾಸ್ಟರ್ ರಸಲ್ಲರು ಸತ್ಯವೇದದ ಬೋಧನೆಗಳನ್ನು ಕಟ್ಟುನಿಟ್ಟಾದ ರೀತಿಯಲ್ಲಿ ಅನುಸರಣೆ ಮಾಡುತ್ತಿದ್ದರು. ಈ ಹಿಂದೆ ಹೇಳಿದಂತೆ, ಅವರು ನಂಬಿ ಬೋಧಿಸಿದುದು: ನಾವು ಯೇಸು ಕ್ರಿಸ್ತನ ಎರಡನೇ ಬರುವಿಕೆಯ ಕಾಲದಲ್ಲಿ ಜೀವಿಸುತ್ತಿದ್ದೇವೆ ಹಾಗೂ 1874ನೇ ಇಸವಿಯಿಂದ ಆತನ ಪ್ರತ್ಯಕ್ಷತೆ ಇರುವುದು (ದಿ ಟೈಮ್ ಆಫ್ ದಿ ಎಂಡ್ ಪುಸ್ತಕವನ್ನು ನೋಡಿ). ಅಂದಿನಿಂದ ನಾವು "ಯುಗಾಂತ್ಯದ ಕಾಲಗಳಲ್ಲಿ" ಜೀವಿಸುತ್ತಿದ್ದೇವೆ. ಈ ಕಾಲದಲ್ಲಿ ಕರ್ತನು ತನ್ನ ಸುಗ್ಗಿಯ ಮಹಾ ಕಾರ್ಯವನ್ನು ನಿರ್ವಹಿಸುತ್ತಿರುವನು. ಸ್ವತಃ ತಾನೇ ಹೇಳಿರುವಂತೆ, ಈ ಸುಗ್ಗಿ ಕಾರ್ಯವು ಒಳ್ಳೆ ಗೋದಿ ಕಾಳಿನಂತಿರುವ ನಿಜವಾದ ಕ್ರೈಸ್ತರನ್ನು ಹಣಜಿಯಂತಿರುವ ತೋರಿಕೆಯ ಕ್ರೈಸ್ತರಿಂದ ಬೇರ್ಪಡಿಸುತ್ತಿದ್ದು, ನಿಜವಾದ ಭಕ್ತರನ್ನು ಕರ್ತನ ರಾಜ್ಯಕ್ಕೆ ಕೂಡಿಸಲಾಗುತ್ತಿರುವದು.

ಇಲ್ಲಿ ಗವುನಿಸಬೇಕಾದ ಒಂದು ಕುತೂಹಲಕಾರಿ ಸಂಗತಿಯೆಂದರೆ, ಯೇಸು ಹೇಳಿದ್ದು--"ಹೊತ್ತುಹೊತ್ತಿಗೆ ಅಶನಕ್ಕೆ ಬೇಕಾದುದ್ದನ್ನು ಅಳೆದು ಕೊಡುವುದಕ್ಕಾಗಿ ಯಜಮಾನನು ತನ್ನ ಮನೆಯವರ ಮೇಲೆ ನೇಮಿಸಿದ ನಂಬಿಗಸ್ತನೂ ವಿವೇಕಿಯೂ ಆಗಿರುವ ಮನೆವಾರ್ತೆಯವನು ಯಾರು? ಯಜಮಾನನು ಬಂದು ಯಾವ ಆಳು ಹೀಗೆ ಮಾಡುವುದನ್ನು ಕಾಣುವನೋ, ಆ ಆಳು ಧನ್ಯನು. ಅಂಥವನನ್ನು ಆತನು ತನ್ನ ಎಲ್ಲಾ ಆಸ್ತಿಯ ಮೇಲೆ ನೇಮಿಸುವನು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ." (ಲೂಕ 12:42–44; ಮತ್ತಾಯ 24:45–47) ಪಾಸ್ಟರ್ ರಸಲ್ಲರ ಲೇಖನವನ್ನು ಓದಿರುವ ಸಾವಿರಾರು ಓದುಗರು ನಂಬುವುದೆಂದರೆ--ಇವರೇ ಆ ನಂಬಿಗಸ್ತನೂ ವಿವೇಕಿಯೂ ಆದ ಮನೆವಾರ್ತೆಯವನ ಕಾರ್ಯ ಸ್ಥಾನವನ್ನು ತುಂಬುವವರು ಹಾಗೂ ಅಲ್ಲಿ ಅವರ ವಿಶೇಷ ಕಾರ್ಯವೆಂದರೆ ಕ್ರಿಸ್ತನಿಗೆ ನಂಬಿಗಸ್ತರಾಗಿರುವ ಆತನ ಮನೆತನದವರಿಗೆ ಹೊತ್ತುಹೊತ್ತಿಗೆ ಬೇಕಾದ ಆಹಾರವನ್ನು ಕೊಡುವುದು. ಅವರ ಸೌಜನ್ಯ

ದೀನತೆಗಳು ಈ ಬಿರುದಾಂಕಿತವನ್ನು ಅವರು ತಮ್ಮದಾಗಿ ಮಾಡಿಕೊಳ್ಳದಂತೆ ಮಾಡಿದವು. ಅವರು ಮಾಡಿದ ಕೆಲಸಗಳ ಇನ್ನೂ ಹೆಚ್ಚಿನ ವಿವರಗಳು ಜೂನ್ 1, 1916 ವಾಚ್ ಟವರ್ ಪತ್ರಿಕೆಯಲ್ಲಿ ಉಲ್ಲೇಖವಾಗಿವೆ.

ಪಾಸ್ಟರ್ ರಸಲ್ಲರು ಪದೇಪದೇ ವಿದೇಶ ಪ್ರಯಾಣಗಳನ್ನು ಮಾಡಿದ್ದರು. 1892ರಲ್ಲಿ ಯೂರೋಪ್ ರಾಷ್ಟ್ರಗಳಿಗೆ ಹಾಗು ಪ್ಯಾಲೆಸ್ಟೇನ್ ದೇಶಗಳಿಗೆ ಪ್ರಯಾಣ ಮಾಡಿ ಹಲವು ದೇಶಗಳಲ್ಲಿ ತಮ್ಮ ಭೇಟಿಯ ಕಾರ್ಯಾರ್ಥವಾದ ಉಪನ್ಯಾಸಗಳನ್ನು ಮಾಡಿದ್ದರು. 1910ರಲ್ಲಿ ರಷ್ಯಾ ಹಾಗೂ ಇತರ ಯೂರೋಪ್ ರಾಷ್ಟ್ರಗಳಿಗೆ ಭೇಟಿ ನೀಡಿ ಅಲ್ಲಿದ್ದ ಸಂಪ್ರದಾಯಸ್ಥ ಯೆಹೂದ್ಯರಿಗೆ ತಾವು ಪುನಃ ಪ್ಯಾಲೆಸ್ಟೇನ್ ದೇಶಕ್ಕೆ ಒಟ್ಟುಗೂಡಿಸಲಿರುವ ವಿಷಯುವಾಗಿ ಉಪನ್ಯಾಸಗಳನ್ನು ಮಾಡಿದ್ದರು. ಆ ವರುಷದ ಅಕ್ಟೋಬರ್ ತಿಂಗಳಿನಲ್ಲಿ ಅವರು ಅಮೇರಿಕಕ್ಕೆ ಹಿಂದಿರುಗಿದಾಗ ನ್ಯೂಯಾರ್ಕಿನ ಹಿಪ್ಪೋಡ್ರೋಮ್ ಸಭಾಂಗಣದಲ್ಲಿ ಸಾವಿರಾರು ಯೆಹೂದ್ಯರಿಂದ ಅವರಿಗೆ ದೊಡ್ಡ ಶ್ಲಾ ಘನೆಗಳು ಬಂದವು. ಅಂದು ಅವರು ಮಾಡಿದ ಉಪನ್ಯಾಸವು ಅಮೇರಿಕ ಹಾಗೂ ಯೂರೋಪಿನಲ್ಲಿ ಯೆಹೂದ್ಯರ ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾದವು. ಅವರು ಹಲವಾರು ಯಹೂದ್ಯರಿಗೆ ಅತಿ ಪ್ರೀತಿಪಾತ್ರರಾಗಿದ್ದರು. 1911ರ ಚಳಿಗಾಲದ ಸಮಯದಲ್ಲಿ ಏಳು ಮಂದಿಯ ಒಂದು ಸಮಿತಿಯ ಅಧ್ಯಕ್ಷರಾಗಿ ಪ್ರಪಂಚ ಪರ್ಯಟನೆಮಾಡಿ ವಿಶೇಷವಾಗಿ ಜಪಾನ್, ಕೊರಿಯ, ಚೀನಾ, ಇಂಡಿಯಾ ಹಾಗೂ ಸಿರಿಯಾ ದೇಶಗಳಲ್ಲಿನ ಸುವಾರ್ತಾಕಾರ್ಯದ ಸ್ಥಿತಿಗತಿಗಳ ಬಗ್ಗೆ ವಿಮರ್ಶೆಮಾಡಿದ್ದರು. 1912ರ ವಸಂತಕಾಲದಲ್ಲಿ ನ್ಯೂಯಾರ್ಕಿನ ಹಿಪ್ಪೋಡ್ರೋಮ್ ಎಂಬಲ್ಲಿ ಈ ಸಮಿತಿಯು ನೀಡುವ ವರಧಿಯನ್ನು ಆಲಿಸಲು ಕೂಡಿಬಂದಿದ್ದ ಒಂದು ಬೃಹತ್ ಸಾರ್ವಜನಿಕ ಸಭೆಯಲ್ಲಿ ಪಾಸ್ಟರ್ ರಸಲ್ಲರು ನೀಡಿದ ವರಧಿ ಹಾಗೂ ಮಾಡಿದ ಉಪನ್ಯಾಸವು ಮಿಷನರಿ ಕೆಲಸಕ್ಕೆ ಸಂಬಂಧಪಟ್ಟವರನ್ನು ಆಮೂಲಾಗ್ರವಾಗಿ ಚಕಿತಗೊಳಿಸಿತು.

ಇನ್ನೂ ಆನಂತರದಲ್ಲಿ ಅವರು ಗ್ರೇಟ್ ಬ್ರಿಟನ್ ದೇಶಕ್ಕೆ ವರುಷಕ್ಕೆ ಒಂದಾವರ್ತಿ ಅಥವಾ ಎರಡಾವರ್ತಿ ಪ್ರಯಾಣಮಾಡಿ ತಾವು ಪಾಲಕರಾಗಿರುವ ಲಂಡನ್ ಸಭೆ ಹಾಗೂ ಇತರ ಸಭೆಗಳಿಗೆ ಭೇಟಿ ನೀಡುತ್ತಾ ಲಂಡನ್ ನಗರದ ಅತಿ ದೊಡ್ಡ ಸಭಾಂಗಣವಾದ ರಾಯಲ್ ಆಲ್ಬರ್ಟ್ ಹಾಲಿನಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಭಾಷಣ ನೀಡಿದ್ದಲ್ಲದೆ ಗ್ಲಾಸ್ಗೋ ನಗರದ ಸೆಂಟ್ ಆಂಡ್ರೂ ಹಾಲ್ ಹಾಗೂ ಎಡಿನ್ಬರೋ ಲಿವರ್ ಪೂಲ್ ಮತ್ತು ಇತರ ನಗರಗಳಲ್ಲಿ ಸಹ ಭಾಷಣ ಮಾಡಿದ್ದರು. ಅವರ ಭಾಷಣಗಳಿಗೆ ಬ್ರಿಟಿಷ್ ಪ್ರೆಸ್ ಎಂಬ ಪತ್ರಿಕಾಸಂಸ್ಥೆ ಯಿಂದ ಸೌಹಾರ್ದಯುತವಾದ ಪ್ರತಿಕ್ರಿಯೆ ವ್ಯಕ್ತವಾಗುತ್ತಿತ್ತು. ಅವರು ಎಲ್ಲೆಲ್ಲಿ ಮಾತನಾಡಿದರೂ ಅದು ದೊಡ್ಡ ಸಭಾಂಗಣದಲ್ಲಿ ಧಾಖಲೆ ಮೀರುವ ಶ್ರೋತೃಗಳಿಗೆ ತಲುಪುತ್ತಿತ್ತು. ಗ್ರೇಟ್ ಬ್ರಿಟನ್ ದೇಶಕ್ಕೆ ಮುಂದೆ ಮಾಡಬೇಕಿದ್ದ ಪ್ರವಾಸಗಳು ಆಗ ನಡೆಯುತ್ತಿದ್ದ ಮಹಾ ಯುದ್ಧದ ದೆಸೆಯಿಂದ ಅಸಾಧ್ಯವಾಗುವಂತೆ ಮಾಡಿದವು. ಅವರು ಕೆನಡಾ ದೇಶದ ಮುಖಾಂತರ ಅಟ್ಲಾಂಟಿಕ್ ಸಾಗರದಿಂದ ಪೆಸಿಫಿಕ್ ಸಾಗರದ ವರೆಗೆ ಹಲವು ಸ್ಥಳಗಳಿಗೆ ಉಪದೇಶ ಪ್ರವಾಸಗಳನ್ನು ಮಾಡಿದ್ದರು. ಹೀಗೆ ಅಮೇರಿಕದ ಕರಾವಳಿಯಿಂದ ಕರಾವಳಿಗೆ ಮಾಡುತ್ತಿದ್ದ ತಮ್ಮ ಉಪನ್ಯಾಸ ಪ್ರವಾಸದ ಸಮಯದಲ್ಲಿ 1916ನೇ ಇಸವಿಯ ಅಕ್ಟೋಬರ್ ತಿಂಗಳಿನ ಕಡೆಯ ದಿನವಾದ 31ರಂದು ಎಕ್ಸ್‌ಪ್ರೆಸ್ ರೈಲಿನಲ್ಲಿ ಕೆನಡಾ ದೇಶದ ಟೆಕ್ಸಾಸ್ ಬಳಿ ಪಾಸ್ಟರ್ ರಸಲ್ಲರ ಅದ್ಭುತಮಯ ಜೀವನವು ಅನಿರೀಕ್ಷಿತವಾಗಿ ಅಂತ್ಯವಾಗುವುದಕ್ಕೆ ತೊಡಗಿತು. ಹೆಚ್ಚುತ್ತಿದ್ದ ತಮ್ಮ ನಿಶ್ಶಕ್ತಿ ನೋವಿನಲ್ಲೂ ತಮ್ಮನ್ನು ಕರೆದ ದೇವರ ಈ ಮಹಾ ಕಾರ್ಯ ವನ್ನು ಪೂರ್ಣವಾಗಿ ನೆರವೇರಿಸುವಾಗಲೇ ಅವರು ಅಕ್ಷರಶಃ ಮೃತಿ ಹೊಂದಿದರು. ತಮ್ಮ ನಂಬಿಕೆಯನ್ನು ಅಂತ್ಯದವರೆಗೂ ಸ್ಥಿರವಾಗಿ ಹಿಡಿದುಕೊಂಡಿದ್ದ ಅವರು ಹೇಗೆ ಮಹಾ ಪುರುಷನಂತೆ ಜೀವಿಸಿ ದರೋ ಹಾಗೆಯೇ ಮಹಾ ಪುರುಷನಂತೆಯೇ ಮರಣ ಹೊಂದಿದರು.

42 ವರುಷಗಳ ತಮ್ಮ ಕ್ರಿಸ್ತೀಯ ಸೇವಕಾರ್ಯಗಳಲ್ಲಿ ಪಾಸ್ಟರ್ ರಸಲ್ಲರು ಪ್ರತ್ಯಕ್ಷವಾಗಿಯಾಗಲಿ ಇಲ್ಲವೇ ಪರೋಕ್ಷವಾಗಿಯಾಗಲಿ

ಎಂದೂ ಹಣದ ಸಹಾಯವನ್ನು ಕೋರಿದ್ದಿಲ್ಲ. ಅವರು ಭಾಷಣ ಮಾಡಿದ ಇಲ್ಲವೇ ಅವರ ಸಹವರ್ತಿಗಳು ಭಾಷಣ ಮಾಡಿದ ಯಾವ ಸಭೆಗಳಲ್ಲೂ ಅವರ ಕೆಲಸಕ್ಕಾಗಿ ಕಾಣಿಕೆ ಎತ್ತುತ್ತಿರಲಿಲ್ಲ. ಕರ್ತನು ಅವರ ಕಾರ್ಯಗಳಿಗೆ ಸಾಕಾಗುವಷ್ಟು ಹಣವನ್ನು ಒದಗಿಸುವನು; ಏಕೆಂದರೆ ಅದು ಕರ್ತನ ಕಾರ್ಯ ಮನುಷ್ಯರದ್ದಲ್ಲ ಎಂಬುದು ಅವರ ವಿಶ್ವಾಸವಾಗಿತ್ತು. ಪ್ರಪಂಚದಾದ್ಯಂತ ಹಲವರಿಂದ ಸ್ವಯಂ ಪ್ರೇರಿತವಾದ ಕಾಣಿಕೆಗಳು ಉಧಾರವಾಗಿ ಬರುತ್ತಿದ್ದುದು ಅವರ ಈ ತೀರ್ಮಾನಗಳು ಸರಿಯಾದುವೆಂದು ತೋರಿಸಿಕೊಟ್ಟಿತ್ತು.

ತಾವು ಯಾವ ಧ್ಯೇಯೋದ್ದೇಶದ ನಿಮಿತ್ತ ತಮ್ಮ ಜೀವಿತವನ್ನು ಮುಡುಪಾಗಿಟ್ಟಿದ್ದರೋ ಅದಕ್ಕೆ ಅವರು ತಮ್ಮ ಸ್ವಂತ ಸ್ವತ್ತನ್ನೆಲ್ಲಾ ಮೀಸಲಾಗಿಟ್ಟರು. ಅವರು ತಮ್ಮ ವೈಯುಕ್ತಿಕ ಖರ್ಚಿಗಾಗಿ ಕೇವಲ 11 ಡಾಲರ್ ಮಾತ್ರ ತಿಂಗಳಿಗೆ ಹೆಸರಿಗಾಗಿ ಪಡೆಯುತ್ತಿದ್ದರು. ಅವರು ಸತ್ತಾಗ ಅವರಿಗೆ ಬಿಟ್ಟು ಹೋಗಲು ಯಾವ ಸ್ವತ್ತೂ ಇರಲಿಲ್ಲ. ಚಿಂತನಾಶೀಲರಾದ ಎಲ್ಲಾ ಮಹಾ ನಾಯಕರಂತೆ, ವಿಶೇಷವಾಗಿ ಸತ್ಯವೇದಕ್ಕೆ ಸಂಬಂಧಿಸಿದ ಸಂಗತಿಗಳಲ್ಲಿ ತಮ್ಮ ಒಡೆಯನ ವಿಷಯದಲ್ಲಿದ್ದಂತೆಯೇ, ಕೆಲವರು ಅವರನ್ನು ತಪ್ಪಾಗಿ ಅರ್ಥಮಾಡಿಕೊಂಡಿದ್ದರು ಅದರಿಂದಾಗಿ ಅವರ ಬಗ್ಗೆ ತಪ್ಪಾಗಿ ವರದಿ ಮಾಡಿದ್ದರು.

ಮರಣವಾದಾಗ ಅವರ ಪಾರ್ಥಿವ ಶರೀರವನ್ನು ನ್ಯೂಯಾರ್ಕಿಗೆ ಸಾಗಿಸಿ ಅವರು ಆ ಊರಿನಲ್ಲಿದ್ದಾಗ ಉಪನ್ಯಾಸ ಮಾಡುತ್ತಿದ್ದ ಹಾಗೂ ಅವರ ಸಂಸ್ಥೆಯ ಸೊತ್ತಾದ ನ್ಯೂಯಾರ್ಕಿನ ಟೆಂಪಲ್ ಮಂದಿರದಲ್ಲಿ ಇರಿಸಿದರು. ದೇಶದ ಎಲ್ಲ ಕಡೆಗಳಿಂದ ಅವರಿಗೆ ಪ್ರಿಯರಾಗಿದ್ದವರು ಕಳುಹಿಸಿದ ಪುಷ್ಪಾರ್ಪಣೆಗಳಿಂದ ಭವ್ಯವಾಗಿ ಅಲಂಕೃತವಾಗಿದ್ದ ಪುಷ್ಪಮಂಟಪದಲ್ಲಿ ಇರಿಸಿದ್ದ ಅವರನ್ನು ಅಲ್ಲಿ ಸಾವಿರಾರು ಜನರು ಕೊನೆಯ ಬಾರಿಗೆ ಅವರ ಮುಖದರ್ಶನ ಮಾಡಿದರು. ಟೆಂಪಲ್ ಎಂಬ ಮಂದಿರವೂ ಪೂರ್ಣವಾಗಿ ಅಮೂಲ್ಯವಾದ ಸುಂದರ ಪುಷ್ಪಗಳಿಂದ ಹೇರಳವಾಗಿ

ಶೃಂಗರಿಸಲ್ಪಟ್ಟಿತ್ತು. ತಾವು ಬಹುವಾಗಿ ಪ್ರೀತಿಸಿ ಗೌರವಿಸಿದ್ದ ಶ್ರೇಷ್ಠನಾದ ಒಬ್ಬ ಸತ್ಪುರುಷನಿಗೆ ತಮ್ಮ ಅಂತ್ಯ ಪ್ರೀತಿಗೌರವಗಳನ್ನು ಸಲ್ಲಿಸಲು ಕೂಡಿಬಂದಿದ್ದ ಬಹು ದೊಡ್ಡ ಗುಂಪಿನ ಸಮಕ್ಷಮದಲ್ಲಿ ಅವರ ಅಂತ್ಯಸಂಸ್ಕಾರವು ಜರುಗಿತು. ಅದು ಅಸಾಮಾನ್ಯವಾದ ಒಂದು ವಿಶೇಷ ಘಟನೆ. ಅಲ್ಲಿ ಮಾತನಾಡಿದವರು ಅವರ ಜೀವನ ಹಾಗೂ ಅವರ ಸೇವಾಕಾರ್ಯವನ್ನು ಭಾವಾವೇಶಪೂರಿತವಾಗಿ ಶ್ಲಾಘನೆ ಮಾಡಿದರು.

ಅವರ ಪ್ರಾರಂಭದ ಜೀವಿತ ಹಾಗೂ ಪರಿಶ್ರಮಗಳು ನಡೆದಿದ್ದ ಸ್ಥಳವಾದ ಉತ್ತರ ಪಿಟ್ಸ್ ಬರ್ಗ್ ಎಂಬಲ್ಲಿಗೆ ಅವರ ಪಾರ್ಥಿವ ಶರೀರವನ್ನು ಕೊಂಡೊಯ್ಯಲಾಯಿತು. ಅಲ್ಲಿ ಅವರಿಗೆ ಪ್ರಸಂಶನೀಯವಾದ ಎರಡನೇ ಅಂತ್ಯಸಂಸ್ಕಾರವು ಕಾರ್ನಗಿ ಸಭಾಂಗಣದಲ್ಲಿ ನಡೆಯಲ್ಪಟ್ಟು ಅವರ ಭೂಸ್ಥಾಪನಾ ಕಾರ್ಯವು ಯುನೈಟೆಡ್ ಸಿಮೆಟ್ರಿ ಎಂಬಲ್ಲಿರುವ ಬೇತೇಲ್ ಎಂಬ ಹೆಸರುಳ್ಳ ಜಮೀನಿನಲ್ಲಿ ಜರುಗಿತು. ಸಮಾಧಿಗೆ ಸಾಗುವ ದಾರಿಯು ಸಾಲಾದ ಪುಷ್ಪಗಳಿಂದ ಅಲಂಕೃತವಾಗಿತ್ತು.

ಬಹುಶಃ ಇತರ ಎಲ್ಲರಿಗಿಂತಲೂ ಆ ಕಾಲದವರಲ್ಲಿ, ಸರ್ವರಿಗೂ ಅತಿ ಪ್ರಿಯರಾಗಿದ್ದ ಬಹು ಅಪೂರ್ವವಾದ ವ್ಯಕ್ತಿಯ ವೃತ್ತಿಜೀವನವು ಹೀಗೆ ಕೊನೆಗೊಂಡಿತು. ತಮ್ಮನ್ನು ತೀರಾ ಅರಿತವರಿಂದ ಅವರು ಬಹು ವಿಶೇಷವಾಗಿ ಪ್ರೀತಿಸಲ್ಪಟ್ಟಿದ್ದರು.

**"... ನಿಮಗೆ ದೇವರ ವಾಕ್ಯವನ್ನು ತಿಳಿಸಿದ ನಿಮ್ಮ ಸಭಾ ನಾಯಕರನ್ನು ಜ್ಞಾಪಕ ಮಾಡಿಕೊಳ್ಳಿರಿ; ಅವರು ಯಾವ ರೀತಿಯಿಂದ ನಡೆದುಕೊಂಡು ಪ್ರಾಣಬಿಟ್ಟರೆಂಬುದನ್ನು ಆಲೋಚಿಸಿರಿ;**
**ಅವರ ನಂಬಿಕೆಯನ್ನು ಅನುಸರಿಸಿರಿ"**
**ಇಬ್ರೀಯ 13:7**

ಹೆಚ್ಚಿನ ವಿವರಗಳಿಗಾಗಿ
ಸಂಪರ್ಕಿಸಿ.